(SRI S. M. KRISHNA)

Assistant Director has reported regarding the non-production of accounts in respect of utilisation of imported materials by the unit *viz.*, Smt. T. G. Venkamma of Bellary. This office has already taken action to issue show cause notice to this unit. So far no reply has been received from the party. Hence action has been taken to inform the licensing authority to stop issue of further Licence/Release Order to this Unit.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಸ್ವಾಮಿ ಈಗ ತಾವು ಹೇಳಿದ ಪ್ರಕಾರ ಎರಡು ಘಟಕಗಳಿಗೆ ಅದನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಕಳೆದ ಅಧಿವೇಶನದಲ್ಲಿ ನನ್ನ 43ನೇ ನಂಬರು ಪ್ರಶ್ನೆಗೆ ಉತ್ತರ ಕೊಡುತ್ತಾ ಒಂದು ಲಿಸ್ಟ್ ಇದೆ, ಆ ಲಿಸ್ಟಿನ ಪ್ರಕಾರ 9 ಯೂನಿಟ್‌ಗಳಿಗೆ ಬಳ್ಳಾರಿ ಜಿಲ್ಲೆಯಲ್ಲಿ 22-24 ಗೇಜ್ ಸ್ಟೈನ್‌ಲೆಸ್ ಸ್ಟೀಲ್ ಅನ್ನು ಹಂಚಿದ್ದೇವೆ ಎಂದು ವರದಿ ಮಾಡಿದ್ದಾರೆ ಎಂದು ಹೇಳಿದ್ದೀರಿ. ಇದರಲ್ಲಿ ಯಾವುದು ನಿಜ. ಯಾವುದು ಸುಳ್ಳು.

ಶ್ರೀ ಎಸ್. ಎಂ. ಕೃಷ್ಣ.—ಇಲ್ಲಿ ಪ್ರಶ್ನೆ ಇರತಕ್ಕುದು ಸ್ಟೈನ್‌ಲೆಸ್ ಸ್ಟೀಲು ದುರುಪಯೋಗ ಆಗಿದೆ ಎನ್ನುವುದು. ಈ ಬಗ್ಗೆ ನಾನು ನನ್ನ ಸ್ಟೇಟ್‌ಮೆಂಟಿನಲ್ಲಿ ಸವಿಸ್ತಾರವಾಗಿ ಹೇಳಿದ್ದೇನೆ. 2-3 ಸಾರಿ ಪ್ರೆಸ್ ಕಮ್ಯುನಿಕೇಷನ್ ಮಾಡಿದರೂ ಸ್ಟೈನ್‌ಲೆಸ್ ಸ್ಟೀಲ್ ತೆಗೆದುಕೊಂಡು ಹೋಗುವುದಕ್ಕೆ ಯಾರೂ ಮುಂದೆ ಬರಲಿಲ್ಲ. ಹಿಂದೆ ಸ್ಟೈನ್‌ಲೆಸ್ ಸ್ಟೀಲಿಗೆ ಬ್ಲಾಕ್‌ಮಾರ್ಕೆಟ್ ರೇಟ್ ಏನು ಇತ್ತು ಈಗ ಅದು ಇಲ್ಲವೇ ಇರುವುದರಿಂದ ಸಣ್ಣ ಉದ್ದಿಮೆದಾರರು ಸ್ಟೈನ್‌ಲೆಸ್ ಸ್ಟೀಲ್ ಅನ್ನು ತೆಗೆದುಕೊಂಡು ಹೋಗುವುದಕ್ಕೆ ಉತ್ಸಾಹಶಾಲಿಗಳಾಗಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ 2 ಯೂನಿಟ್ ಅಲ್ಲ ಹತ್ತಾರು ಯೂನಿಟ್‌ಗಳಿಗೆ ಸ್ಟೈನ್‌ಲೆನ್ ಸ್ಟೀಲ್ ಕೊಡುತ್ತೇವೆ. ಈಗ ಇಲ್ಲಿ ಕಂಪ್ಲೆಂಟ್ ಬಂದಿರುವುದು ಎರಡು ಯೂನಿಟ್‌ಗಳ ವಿಚಾರದಲ್ಲಿ.

(ii) *re*: Grant of Reserved land in Hemavathi Atchkat Area to local People in Contravention of Orders of Government.

Sri K. H. HANUME GOWDA (Hassan).— I beg to call the attention of the Hon. Minister for revenue to the grant of reserved land coming under Hemavathi Atchkat to the people of local area in contravention of Government Orders.

Sri N. HUTCHAMASTHY GOWDA (Minister for Revenue).—I State as follows :

The land in Pandavapur and Krishnarajpet Taluks reserved for being granted to the displaced persons under Hemavathi Project have not been sanctioned by the Consultative Committees and no such cases were placed before the Committees for consideration.

The Special Land Acquisition Offieer, Hemavathi Project who is at present looking after the rehabilitation work has inspected the available Government lands in Mandya District and has furnished villagewise and survey numberwise list to the Deputy Commissioner.

Accordingly, the following extents in the Taluks have been selected for assignment to the displaced persons :—

			Acres—Gts.
1	Krishnarajpet	...	10,160—30
2	Pandavapura Taluk	...	1,206—15
3	Nagamangala Taluk	...	834—00

In exercise of the powers conferred on the Assistant Commissioner under Section 71 of the Mysore Land Revenue Act, 1964, the Assistant Commissioner, Pandavapura has issued the notification in No. LND. CR 201/72-73, dated 23-9-1972 reserving these areas for assignment in favour of the displaced persons. Hence, the question of assignment of these lands in favour of others does not arise.

2-00 P.M.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಮುಂಡ್ಯದಲ್ಲಿ 12140 ಎಕರೆ ಜಮೀನನ್ನು ರಿಜರ್ವ್ ಮಾಡಿದ್ದೀವೆ ಎಂದು ಹೇಳಿದ್ದೀರಿ. ನನಗೆ ಗೊತ್ತಿರುವ ಹಾಗೆ ಅಲ್ಲಿ 12140 ಎಕರೆ ನೀರಾವರಿಯಾಗುವ ಜಮೀನು ಇಲ್ಲ, 3-4 ಸಾವಿರ ಎಕರೆಯಲ್ಲಿ ಮಾತ್ರ ನೀರಾವರಿಯಾಗುತ್ತದೆ. ಬಾಕಿ ಜಮೀನು ಬೋರೆ ಮತ್ತು ಬಂಜರು ಜಮೀನು, ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಎಂದು ನನಗೆ ತಿಳಿದುಬಂದಿದೆ. ನೀರಾವರಿಯಾಗತಕ್ಕಂಥಾ ಜಮೀನನ್ನು ಮಾತ್ರ ರಿಜರ್ವ್ ಮಾಡಿ ಮುಳುಗಡೆ ಪ್ರದೇಶದ ಜನಗಳಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ 12 ಸಾವಿರ ಚಿಲ್ಲರೆ ಎಕರೆ ಭೂಮಿಯಲ್ಲಿ ಎಷ್ಟು ಖುಷ್ಕಿ ಇದೆ, ಎಷ್ಟು ತರಿ ಇದೆ ಎನ್ನುವುದರ ವಿವರ ಇಲ್ಲ. ಮಾನ್ಯ ಸದಸ್ಯರು ಹೇಳುವ ಹಾಗೆ ಖುಷ್ಕಿ ಜಮೀನು ಪ್ರಯೋಜನವಿಲ್ಲ ಎಂದರೆ ಅದನ್ನು ಡಿಸ್-ರಿಸರ್ವ್ ಮಾಡಿ ಉಳಿದ ಕಡೆ ಜಮೀನು ಕೊಡಬೇಕಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ. ತಾವು 23-9-1972ರಿಂದ ಜಮೀನು ರಿಸರ್ವ್ ಮಾಡಿದ್ದೇವೆಂದು ಹೇಳಿದ್ದೀರಿ. ಆ ತಾರೀಖಿನಿಂದ ಈಚೆಗೆ ನೀರಾವರಿ ಆಗತಕ್ಕಂತಹ ಜಮೀನನ್ನು ಕೆ. ಆರ್. ಪೇಟೆ, ನಾಗಮಂಗಲ ಇಂಥ ಕಡೆಗಳಲ್ಲಿ ದರಖಾನ್ತು ಮೂಲಕ ಕೊಟ್ಟಿದ್ದರೆ ಅಂಥವುಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಹಾಗೆ ಕೊಟ್ಟಿಲ್ಲವೆಂದಾಗ ಈ ಪ್ರಶ್ನೆ ಉದ್ಭವವಾಗುವುದಿಲ್ಲ. ಮಾನ್ಯ ಸದಸ್ಯರು ಹೇಳುವ ಹಾಗೆ ಕೊಟ್ಟಿದ್ದರೆ ರಿಸರ್ವ್ ಮಾಡಿದ್ದನ್ನು ಕ್ಯಾನ್ಸಲ್ ಮಾಡಬೇಕಾಗುತ್ತದೆ.

Taking up Some Calling Attention Notices

ಶ್ರೀ ಕೆ. ಶ್ರೀರಾಮುಲು.—ನಾನು ಮೈಸೂರು ಮೆಶಿನರಿಯ ಬಗ್ಗೆ ಒಂದು ಕಾಲ್ ಅಟೆನ್‌ಶನ್ ನೋಟೀಸು ಕಳುಹಿಸಿದ್ದೆ.

ಅಧ್ಯಕ್ಷರು.—ಅದನ್ನು ನೋಡಿಕೊಳ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಂಡೂರ್ ಬಳಿ ಒಂದು ಆಕ್ಸಿಡೆಂಟ್ ಆಗಿ ಕೆಲವು ಜನರು ಸತ್ತಿದ್ದಾರೆ. ಅದರ ಬಗ್ಗೆ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳಿಸಿದ್ದೆ.

ಅಧ್ಯಕ್ಷರು.—ಅದನ್ನು ಸಹ ತೆಗೆದುಕೊಳ್ಳೋಣ.